# ಶಂಪಾ ಪ್ರತಿಷ್ಠಾನ, ಬೆಂಗಳೂರು

## ಪ್ರವಾಸ - ಒಂದು ಚಿಂತನೆ

ಮಂಜುನಾಥ ಡಿ. ಎಸ್.　　　　　　೩೦ ಜುಲೈ ೨೦೨೩

- ದೇಶ ಸುತ್ತು ಕೋಶ ಓದು - ಚಿರಪರಿಚಿತ ನಾಣ್ಣುಡಿ
- ಈ ಎರಡೂ ಕ್ರಿಯೆಗಳು ಜ್ಞಾನಾರ್ಜನೆಯ ಪ್ರಮುಖ ಮಾರ್ಗಗಳು
- ಇವೆರಡೂ ಪರಸ್ಪರ ಪೂರಕ ಕ್ರಿಯೆಗಳೂ ಆಗಿವೆ
- ದೇಶ ಸುತ್ತಿದ ಅನೇಕ ಲೇಖಕರು ತಮ್ಮ ಅನುಭವಗಳನ್ನು ಅಕ್ಷರ ರೂಪದಲ್ಲಿ ದಾಖಲಿಸಿದ್ದಾರೆ
- ಆ ಮೂಲಕ ಪ್ರವಾಸ ಸಾಹಿತ್ಯದ ಸೃಷ್ಟಿಗೆ ಕಾರಣಕರ್ತರಾಗಿದ್ದಾರೆ

ಪ್ರವಾಸ ಕಥನಗಳು

- ದೇಶ ಅಥವಾ ಪ್ರದೇಶದ ಇತಿಹಾಸ
- ಅಲ್ಲಿನ ಜೀವನಕ್ರಮ
- ಆಚಾರ ವಿಚಾರಗಳು
- ಕಲೆ - ಸಂಸ್ಕೃತಿ
- ಆರ್ಥಿಕತೆ
- ಆಡಳಿತ ವ್ಯವಸ್ಥೆ

ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತವೆ

# ಭಾರತೀಯ ಭಾಷೆಯ ಪ್ರಪಥಮ ಪ್ರವಾಸ ಕಥನ

- ಸಿರಿಯನ್ ಪಾದ್ರಿ ಪಿ. ಟಿ. ಕಥನರ್ 18ನೆಯ ಶತಮಾನದಲ್ಲಿ ಬರೆದ

"ವರ್ತಮಾನ ಪುಸ್ತಕಂ" - ಭಾರತೀಯ ಭಾಷೆಯ ಪ್ರಪಥಮ ಪ್ರವಾಸ ಕಥನ ಎನ್ನಲಾಗಿದೆ

- ನೇಪಥ್ಯಕ್ಕೆ ಸರಿದಿದ್ದ ಈ ಮಲಯಾಳಂ ಕೃತಿಯನ್ನು 1935 ರಲ್ಲಿ ಮರುಶೋಧಿಸಿ, 1936 ರಲ್ಲಿ ಮುದ್ರಿಸಲಾಯಿತೆಂದು ದಾಖಲೆಗಳಿಂದ ತಿಳಿದು ಬರುತ್ತದೆ.

- ಸಿರಿಯನ್ ಕ್ಯಾಥೊಲಿಕರ ಸಮಸ್ಯೆಗಳನ್ನು ಪೋಪರಲ್ಲಿ ನಿವೇದಿಸಿಕೊಳ್ಳಲು ಲೇಖಕರು ರೋಂಗೆ ಪಯಣಿಸಿದ ಚಾರಿತ್ರಿಕ ಪ್ರವಾಸದ ದಾಖಲೆ ಇದಾಗಿದೆ.

# ಕನ್ನಡದ ಪಥಮ ಪ್ರವಾಸ ಕಥನ

- ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರು 1890 ರಲ್ಲಿ ಪ್ರಕಟಿಸಿದ "ದಕ್ಷಿಣ ಭಾರತ ಯಾತ್ರೆ" - ಕೃತಿಯನ್ನು ಕನ್ನಡ ಭಾಷೆಯ ಮೊದಲ ಪ್ರವಾಸ ಕಥನ ಎಂದು ಪರಿಗಣಿಸ ಲಾಗಿದೆ

- 30 ವರ್ಷಗಳ ನಂತರ 1920 ರಲ್ಲಿ ಶ್ರೀ ವಿ. ಸೀತಾರಾಮಯ್ಯನವರ "ಪಂಪಾ ಯಾತ್ರೆ" - ಪ್ರವಾಸ ಕೃತಿ ಪ್ರಕಟವಾಯಿತು

- ಇದರಲ್ಲಿ ಲೇಖಕರು ತಮ್ಮ ಹಂಪೆಯ ಭೇಟಿಯ ವಿವರಗಳನ್ನು ದಾಖಲಿಸಿದ್ದಾರೆ

- ಶ್ರೀಯುತರ ಲೋಕಾನುಭವ, ತತ್ತ್ವ ಚಿಂತನೆ, ಮತ್ತು ಜೀವನ ದೃಷ್ಟಿಯ ಸಂಗಮ ಈ ಕೃತಿಯಲ್ಲಿ ಕಂಡುಬರುತ್ತದೆ

## ಪಶ್ಚಿಮ ದೇಶದ ಪ್ರವಾಸದ ಕನ್ನಡದ ಮೊದಲ ಗ್ರಂಥ

- ಬಿ. ಪುಟ್ಟಯ್ಯನವರ "ಅಭಿವೃದ್ಧಿಯ ಸಂದೇಶ" - ಪಶ್ಚಿಮ ದೇಶದ ಪ್ರವಾಸದ ಕನ್ನಡದ ಮೊದಲ ಗ್ರಂಥ

- ವಿನಾಯಕ ಕೃಷ್ಣ ಗೋಕಾಕರ ಪ್ರಮುಖ ಪ್ರವಾಸ ಸಾಹಿತ್ಯ ಕೃತಿಗಳು

- ಸಮುದ್ರದಾಚೆಯಿಂದ
- ಇಂದಲ್ಲ ನಾಳೆ
- ಸಮುದ್ರದೀಚೆಯಿಂ

## ಇತರ ಪ್ರಮುಖ ಪ್ರವಾಸ ಕೃತಿಗಳು

- ಡಾ. ಕೆ. ಶಿವರಾಮ ಕಾರಂತರ “ಅಪೂರ್ವ ಪಶ್ಚಿಮ” ಕನ್ನಡದ ಪ್ರಮುಖ ಪ್ರವಾಸ ಸಾಹಿತ್ಯ ಕೃತಿಗಳ ಸಾಲಿನಲ್ಲಿ ಸ್ಥಾನ ಪಡೆದಿದೆ.

- “ನಾ ಕಂಡ ಪಡುವಣ” - ಶ್ರೀ ದಿನಕರ ದೇಸಾಯಿಯವರ ಪ್ರವಾಸ ಕಥನ

- “ಶ್ರೀರಂಗ ಯಾತ್ರೆ” - ಶ್ರೀರಂಗರ ಯೂರೋಪ್ ಪ್ರವಾಸ ಕುರಿತ ಗ್ರಂ

# ಅಮೆರಿಕ ಕುರಿತ ಪ್ರಮುಖ ಪ್ರವಾಸ ಕೃತಿಗಳು

- ಡಾ. ಬಿ.ಜಿ.ಎಲ್. ಸ್ವಾಮಿಯವರ "ಅಮೆರಿಕದಲ್ಲಿ ನಾನು"
- ಡಾ. ಕೃಷ್ಣಾನಂದ ಕಾಮತರ "ನಾನೂ ಅಮೆರಿಕೆಗೆ ಹೋಗಿದ್ದೆ"
- ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ "ಅಮೆರಿಕದಲ್ಲಿ ಗೋರೂರು"
- ಶ್ರೀ ರಾ. ಯ. ಧಾರವಾಡಕರರ "ನಾ ಕಂಡ ಅಮೆರಿಕೆ"

ಇವು ಕೇವಲ ಕೆಲವು ಪ್ರಮುಖ ಪ್ರವಾಸ ಸಾಹಿತ್ಯ ಗ್ರಂಥಗಳಷ್ಟೇ !

# 1970 ರ ನಂತರದ ಪ್ರವಾಸ ಸಾಹಿತ್ಯ ಕೃತಿಗಳು

- 1970 ರಿಂದ ಆರಂಭಗೊಂಡ ಸುಮಾರು ನಾಲ್ಕು ದಶಕಗಳಲ್ಲಿ ವಿಭಿನ್ನ ದೃಷ್ಟಿಕೋನಗಳ ಪ್ರವಾಸ ಕೃತಿಗಳು ವಿಪುಲ ಸಂಖ್ಯೆಯಲ್ಲಿ ಪ್ರಕಟಗೊಂಡವು
- ಅನೇಕ ಮಹಿಳೆಯರು ಸಹ ಈ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವುದು ಗಮನಾರ್ಹ ಹಾಗು ಪ್ರಶಂಸನೀಯ
- ಈ ಅವಧಿಯಲ್ಲಿ ಕನ್ನಡ ಭಾಷೆಯ ಪ್ರವಾಸ ಸಾಹಿತ್ಯ ಕೃಷಿ ಅಪೂರ್ವವೂ, ಸಮೃದ್ಧವೂ ಅಗಿತ್ತೆಂದು ಅಭಿಪ್ರಾಯ ಪಡಲಾಗಿದೆ

# ಈ ಕಾಲಘಟ್ಟದ ಹೆಸರಾಂತ ಪ್ರವಾಸ ಕೃತಿಗಳು

- ಡಾ. ದೇ.ಜ.ಗೌ. ಅವರ "ವಿದೇಶಗಳಲ್ಲಿ ನಾಲ್ಕು ವಾರ" ಮತ್ತು "ಪ್ರವಾಸಿಯ ದಿನಚರಿ"
- ಶ್ರೀ ರಾವ ಬಹದ್ದೂರರ "ನಾನು ಕಂಡ ಬಾಂಗ್ಲಾ ದೇಶ"
- ಡಾ. ಜಿ.ಎಸ್. ಶಿವರುದ್ರಪ್ಪನವರ "ವಿದೇಶಗಳಲ್ಲಿ 22 ದಿನ"
- ಶ್ರೀಮತಿ ಶಾಂತಾದೇವಿ ಮಾಳವಾಡರ "ಶ್ರೀಗಿರಿಯಿಂದ ಹಿಮಗಿರಿಗೆ"
- ಡಾ. ಅನುಪಮಾ ನಿರಂಜನರ "ಸ್ನೇಹ ಯಾತ್ರೆ"
- ಶ್ರೀಮತಿ ನೀಳಾದೇವಿಯವರ "ನಾ ಕಂಡ ಆ ಖಂಡ"
- ಶ್ರೀಮತಿ ಪದ್ಮಾ ಗುರುರಾಜ್ ಅವರ "ಕಾಂಗರೂಗಳ ನಾಡಿನಲ್ಲಿ"

# ಹೊಸ ಸಹಸ್ರಮಾನದ ಮೊದಲ ದಶಕದಲ್ಲಿ

- 2000 - ಈ ಸಹಸ್ರಮಾನದ ಮೊದಲ ದಶಕದಲ್ಲಿಯೇ ಮೂವತ್ತಕ್ಕೂ ಹೆಚ್ಚು ಕನ್ನಡ ಪ್ರವಾಸ ಸಾಹಿತ್ಯ ಕೃತಿಗಳು ಪ್ರಕಟಗೊಂಡಿವೆ

- ಸಿಂಗಪುರ್, ಮಲೇಷಿಯ, ಥಾಯ್ಲೆಂಡ್, ದುಬೈ, ಲಂಡನ್, ಜಪಾನ್, ಯೂರೋಪ್, ಆಸ್ಟ್ರೇಲಿಯ, ನ್ಯೂಜಿಲೆಂಡ್, ಆಫ್ರಿಕ - ಹೀಗೆ ಹತ್ತು ಹಲವು ದೇಶಗಳನ್ನು ಪರಿಚಯಿಸುವ ನೂರಾರು ಲೇಖನಗಳು ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾಗಿವೆ.

- ಅನೇಕ ಪತ್ರಿಕೆಗಳ ಪ್ರೋತ್ಸಾಹದಿಂದ ಈ ಸಂಖ್ಯೆ ದಿನೇ ದಿನೇ ವೃದ್ಧಿಸುತ್ತಿದೆ.

- ವ್ಯಕ್ತಿತ್ವ ವಿಕಸನಕ್ಕೂ ಪ್ರವಾಸ ಸಾಹಿತ್ಯವನ್ನು ಬಳಸಿಕೊಂಡಿರುವ ನಿದರ್ಶನಗಳು ನಮ್ಮ ಮುಂದಿವೆ

# ಮಿಲೆನಿಯಂ ಓದುಗರ ಆಯ್ಕೆ

- ಮಿಲೆನಿಯಂ ಓದುಗರ ಆಯ್ಕೆಯಲ್ಲಿ ಪ್ರವಾಸ ಸಾಹಿತ್ಯವೂ ಸೇರಿದೆಯೆಂದು ಯುವ ಅಂಕಣಗಾರ್ತಿಯೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ
- ಯುವ ಜನತೆ ಪ್ರವಾಸ ಹಾಗು ಪ್ರವಾಸ ಸಾಹಿತ್ಯದಲ್ಲಿ ಆಸಕ್ತಿ ತೋರುತ್ತಿರುವುದು ಗಮನಾರ್ಹ
- ಯುವ ಲೇಖಕ ಶ್ರೀ ಪ್ರಸಾದ ನಾಯ್ಕ ಅವರ "ಹಾಯ್ ಅಂಗೋಲಾ" ಪ್ರವಾಸ ಸಾಹಿತ್ಯ ಕೃತಿ 2018 ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿರುವುದನ್ನು ಇಲ್ಲಿ ಸ್ಮರಿಸಬಹುದು

## ಪ್ರವಾಸ ಕುರಿತಂತೆ ಡಾ. ದೊಡ್ಡರಂಗೇಗೌಡರ ಮಾತುಗಳು

ಮಾನವನಿಗೆ ಒಂದೇ ಕಡೆ ಅನೇಕ ವರ್ಷಗಳು ವಾಸ ಮಾಡುವುದು ಬೇಸರವೇ! ಬೇರೆ ಬೇರೆ ಊರು ಕೇರಿಗಳನ್ನು ನೋಡಬೇಕು, ಬೃಹತ್ ಶಹರಗಳಲ್ಲಿ ತಿರುಗಾಡಬೇಕು, ತನಗೆ ಬೇಕಾದ ಅನ್ಯ ಪ್ರದೇಶಗಳ ತಿಂಡಿ ತಿನ್ನಬೇಕು, ಕಂಡ ಕಂಡದ್ದ ಥೈಲಿ ಖಾಲಿಯಾಗುವವರೆಗೂ ಕೊಳ್ಳಬೇಕು, ವಿವಿಧ ಜನರ ವೇಷ ಭೂಷ, ನಡೆ ನುಡಿ, ಆಚಾರ ವಿಚಾರ ಅರಿಯಬೇಕೆಂಬ ಕುತೂಹಲ ಇದ್ದೇ ಇರುತ್ತದೆ.

## ಪ್ರವಾಸ ಕುರಿತಂತೆ ಡಾ. ದೊಡ್ಡರಂಗೇಗೌಡರ ಮಾತುಗಳು - ಮುಂದುವರಿದುದು

ಪ್ರಕೃತಿಯ ಮೇಲ್ಮೈಯನ್ನು ಅರಿಯಲು, ನದಿ ನದಗಳ ಬಳಿ ಆಟವಾಡಲು, ಈಜಲು, ಸಮುದ್ರ ಸ್ನಾನ ಮಾಡಲು, ಪ್ರಾಣಿ ಪಕ್ಷಿಗಳ ಕಣ್ಣಾರೆ ಕಾಣಲು, ಬಗೆ ಬಗೆ ಪ್ರಾದೇಶಿಕ ವೈಭವಗಳ ಮನಸಾರೆ ಕಣ್ತುಂಬಿಕೊಳ್ಳಲು, ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ, ರಜಾಗಳಿಗೆ ತಕ್ಕಂತೆ, ತಮ್ಮದೇ ಅಭಿರುಚಿ ಹಾಗು ಮನೋಧರ್ಮಗಳು ಹೊಂದಿಕೆ ಆಗುವವರ ಜೊತೆ ಪ್ರವಾಸ ಮಾಡುತ್ತಾನೆ ಮಾನವ.

ಕುತೂಹಲ, ತಿಳಿಯುವ ಹಂಬಲ, ಜ್ಞಾನ ಹೆಕ್ಕಿಕೊಳ್ಳುವ ಸಂಭ್ರಮ, ಇವುಗಳು ಪ್ರವಾಸಕ್ಕೆ ಪ್ರೇರಣೆ ನೀಡುತ್ತವೆ.

# ಪ್ರವಾಸ

ಪ್ರವಾಸ ಎನ್ನುವುದೇ ಮನುಷ್ಯನ ಅರಿವಿನ ಅವಿಭಾಜ್ಯ ಆಗರ ಎಂದಿದ್ದಾರೆ ಶ್ರೀ ವಾಸುದೇವ ನಾಡಿಗರು. ಅವರ ಪ್ರಕಾರ, ಸುಮ್ಮನೆ ಹೀಗೆ ಕೂತು ಯೋಚಿಸಿದರೂ ಸಾಕು ಪ್ರಯಾಣ ಪ್ರವಾಸ ಆಗಬಲ್ಲದು.

ಡಚ್ಚರು, ಪರ್ಶಿಯನ್ನರು, ಫ್ರೆಂಚರು ಕಡಲಿನ ಮೂಲಕ ಭೂಖಂಡಗಳನ್ನು ಹುಡುಕಲು ಹೊರಟ ಸಾಹಸೀ ಪ್ರವೃತ್ತಿ ಸೃಷ್ಟಿಸಿದ ಮಾಯಾಲೋಕವನ್ನು ಮರೆಯುವಂತಿಲ್ಲ.

ಮೆಗಾಸ್ತನೀಸ್, ಹ್ಯುಯೆನ್ ತ್ಸ್ಯಾಂಗ್, ಫಾಹಿಯಾನರಂತಹ ಸಂಸ್ಕೃತಿ ಶೋಧಕರ ಅನುಭವದ ದಾಖಲೆಗಳು ಇಂದಿಗೂ ಮಾಹಿತಿಗಳ ಅಗರವಾಗಿವೆ.

# ಪ್ರವಾಸ

ಪ್ರವಾಸ ಎನ್ನುವುದೇ ಮನುಷ್ಯನ ಅರಿವಿನ ಅವಿಭಾಜ್ಯ ಆಗರ ಎಂದಿದ್ದಾರೆ ಶ್ರೀ ವಾಸುದೇವ ನಾಡಿಗರು. ಅವರ ಪ್ರಕಾರ, ಸುಮ್ಮನೆ ಹೀಗೆ ಕೂತು ಯೋಚಿಸಿದರೂ ಸಾಕು ಪ್ರಯಾಣ ಪ್ರವಾಸ ಆಗಬಲ್ಲದು.

ಡಚ್ಚರು, ಪರ್ಶಿಯನ್ನರು, ಫ್ರೆಂಚರು ಕಡಲಿನ ಮೂಲಕ ಭೂಖಂಡಳನ್ನು ಹುಡುಕಲು ಹೊರಟ ಸಾಹಸೀ ಪ್ರವೃತ್ತಿ ಸೃಷ್ಟಿಸಿದ ಮಾಯಾಲೋಕವನ್ನು ಮರೆಯುವಂತಿಲ್ಲ.

ಮೆಗಾಸ್ತನೀಸ್, ಹ್ಯುಯೆನ್ ತ್ಸ್ಯಾಂಗ್, ಫಾಹಿಯಾನರಂತಹ ಸಂಸ್ಕೃತಿ ಶೋಧಕರ ಅನುಭವದ ದಾಖಲೆಗಳು ಇಂದಿಗೂ ಮಾಹಿತಿಗಳ ಅಗರವಾಗಿವೆ.